# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 449 |
| 2 | ಸದಸ್ಯರ ಹೆಸರು | ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | 10-12-2025 |
| 4 | ಉತ್ತರಿಸುವವರು | ಮಾನ್ಯ ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು |
| | **ಪ್ರಶ್ನೆಗಳು** | **ಉತ್ತರಗಳು** |
| ಅ | ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತಕ್ಕೆ ಸೇರಿದ ವ್ಯಾಪಾರ ಮಳಿಗೆಗಳಲ್ಲಿ ಅಪಾರ ಬೇಡಿಕೆ ಇದ್ದರೂ ಸಹ ಸಕಾಲದಲ್ಲಿ ಪೂರೈಕೆ ಇಲ್ಲದ ಕಾರಣ ರೇಷ್ಮೆ ಸೀರೆಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿದೆ. |
| ಆ | ಸದರಿ ರೇಷ್ಮೆ ಸೀರೆಗಳ ಬೆಲೆಯಲ್ಲಿಯೂ ಗಣನೀಯವಾಗಿ ಏರಿಕೆಯಾಗಿದ್ದು ಸಾಮಾನ್ಯ ಜನರ ಕೈಗೆಟುಕದಂತಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೆಎಸ್ಐಸಿ ನಿಗಮದ ರೇಷ್ಮೆ ಜರಿ ಸೀರೆಗಳ ಉದ್ದಿಮೆಗೆ ಬಳಸುವ ಕಚ್ಚಾ ರೇಷ್ಮೆ ಕಲಾಪತ್ (Gold lace) ಮತ್ತು ಇತರೆ ಎಲ್ಲಾ ಸಾಮಗ್ರಿಗಳ ಮಾರುಕಟ್ಟೆ ಬೆಲೆ ಕ್ರಮೇಣವಾಗಿ ಹೆಚ್ಚಾಗಿದ್ದು, ಕಚ್ಚಾ ಸಾಮಗ್ರಿಗಳನ್ನು ಖರೀದಿಸಲು ಆಗುವಂತಹ ಮೇಲ್ವೆಚ್ಚ ಇವೆಲ್ಲವನ್ನು ಗಣನೆಗೆ ತೆಗೆದುಕೊಂಡು ಸೀರೆಗಳ ಮಾರಾಟ ಬೆಲೆ ನಿಗಧಿ ಪಡಿಸಲಾಗುತ್ತಿದೆ. |
| ಇ | ಸದರಿ ರೇಷ್ಮೆ ಸೀರೆಗಳ ಬೇಡಿಕೆಯು ಗಣನೀಯವಾಗಿದ್ದರೂ ಸಹ ಹೆಚ್ಚು ಹೆಚ್ಚು ಸೀರೆಗಳ ಉತ್ಪಾದನೆಗೆ ಒತ್ತು ಕೊಡದೆ ನಿರ್ಲಕ್ಷ್ಯ ವಹಿಸುತ್ತಿರುವುದರಿಂದ ರಾಜ್ಯ ಸರ್ಕಾರಕ್ಕೆ ಸಿಗಬಹುದಾದ ಲಾಭದಲ್ಲಿ ಇಳಿಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸದರಿ ರೇಷ್ಮೆ ಸೀರೆಗಳು ಬೇಡಿಕೆಯು ಗಣನೀಯವಾಗಿ ಹೆಚ್ಚಾಗುತ್ತಿರವ ಹಿನ್ನೆಲೆಯಲ್ಲಿ ರೇಷ್ಮೆ ನೇಯ್ಗೆ ಕಾರ್ಖಾನೆಯ ಸಂಯೋಜಿತ ರೇಷ್ಮೆ ನೇಯ್ಗೆ ಘಟಕ-2ರಲ್ಲಿ 10 ಇ-ಜೆಕಾರ್ಡ್ ಮಗ್ಗಗಳನ್ನು ಮತ್ತು ರೇಷ್ಮೆ ನೇಯ್ಗೆ ಘಟಕ ಚನ್ನಪಟ್ಟಣ ಇಲ್ಲಿ 20 ಇ-ಜೆಕಾರ್ಡ್ ಯಂತ್ರಗಳನ್ನು ಸ್ಥಾಪಿಸಲಾಗಿದ್ದು, ಈ ಯಂತ್ರಗಳು ಈಗಾಗಲೇ ಚಾಲನೆಯಲ್ಲಿದ್ದು, ಈ ಯಂತ್ರಗಳಲ್ಲಿ ಹೆಚ್ಚುವರಿ ಉತ್ಪಾದನೆಯನ್ನು ತೆಗೆಯಲಾಗುತ್ತಿದೆ. ಜೊತೆಗೆ ಈ ಯಂತ್ರಗಳನ್ನು ಕಾರ್ಯಾಚರಣೆಗೊಳಿಸಲು ನುರಿತ ನೇಕಾರರನ್ನು ಮತ್ತು ನಿವೃತ್ತ ನೇಕಾರರನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುತ್ತಿದೆ. ಹಾಗಾಗಿ, ರೇಷ್ಮೆ ಸೀರೆಗಳ ಉತ್ಪಾದನೆಗೆ ನಿಗಮವು ಎಲ್ಲಾ ಪೂರಕ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಯಾವುದೇ ನಿರ್ಲಕ್ಷ್ಯ ವಹಿಸುತ್ತಿಲ್ಲ. |
| ಈ | ಸದರಿ ರೇಷ್ಮೆ ಸೀರೆಗಳಿಗೆ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆ ಇರುವುದರಿಂದ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ತಯಾರಿಕಾ ಘಟಕಗಳನ್ನು ಸ್ಥಾಪನೆಮಾಡುವ ಅವಶ್ಯಕತೆ ಇದೆಯೇ? | ಈಗಾಗಲೇ ರೇಷ್ಮೆ ಸೀರೆಗಳಿಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆ ಇರುವುದರಿಂದ ಚನ್ನಪಟ್ಟದಲ್ಲಿ ರೇಷ್ಮೆ ನೇಯ್ಗೆ ಘಟಕವನ್ನು 2013ನೇ ಸಾಲಿನಲ್ಲಿ ಸ್ಥಾಪಿಸಲಾಗಿರುತ್ತದೆ. ಈ ಘಟಕದಿಂದ ಪ್ರಸ್ತುತ ತಿಂಗಳಿಗೆ ಸುಮಾರು 7,500 ಮೀಟರ್ ನಷ್ಟು ಉತ್ಪಾದನೆ ತೆಗೆಯಲಾಗುತ್ತಿದೆ. |

**ಸಂಖ್ಯೆ:ರೇಷ್ಮೆ 411 ರೇಇವಿ 2025**

(ಸಹಿ)

**(ಕೆ.ವೆಂಕಟೇಶ್)**

**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**